

بسم اللهِ الرّحمٰن الرّحيم

# ತವಕ್ಕುಲ್ ಅಲಲ್ಲಾಹ್ ಕುರಿತು ಹಝ್ರತ್ ಪೈಗಂಬರ್(ಸ)ರ ಜೀವನ ಚರಿತ್ರೆಯ ವಿಶ್ವಾಸವರ್ಧಕ ಪ್ರಸ್ತಾಪ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11-09-2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ **'ತವಕ್ಕುಲ್ ಅಲಲ್ಲಾಹ್'** ಕುರಿತು ಕಳೆದ ಜುಮುಅದಲ್ಲಿ ವಿವರಿಸಲಾಗಿತ್ತು. ಇಂದು ಸಹ ಅದೇ ವಿಷಯವಾಗಿದೆ. ಹಝ್ರತ್ ಪೈಗಂಬರ್(ಸ) ತಮಗಾಗಿ ತವಕ್ಕುಲ್ ಕುರಿತು ಹೇಗೆ ದುಆ ಮಾಡುತ್ತಿದ್ದರು ಎಂಬುದರ ಬಗ್ಗೆ ಒಂದು ವರದಿ ಹೀಗಿದೆ: ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ)ರಿಂದ ವರದಿಯಾಗಿದೆ, ನಬಿ(ಸ) ರುಕೂಅ್‌ಗೆ ಹೋಗುವಾಗ ಹೀಗೆ ದುಆ ಮಾಡುತ್ತಿದ್ದರು: **"**ಹೇ ಅಲ್ಲಾಹ್, ನಾನು ನಿನಗಾಗಿಯೇ ರುಕೂಅ್ ಮಾಡಿದೆ, ನಿನ್ನ ಮೇಲೆಯೇ ವಿಶ್ವಾಸ ಇಟ್ಟೆನು, ನಾನು ನನ್ನನ್ನು ನಿನಗೇ ಒಪ್ಪಿಸಿದೆ, ನಿನ್ನ ಮೇಲೆಯೇ ಭರವಸೆ ಇಟ್ಟೆನು. ನೀನೇ ನನ್ನ ಪ್ರಭು ಆಗಿದ್ದೀಯ. ನನ್ನ ಶ್ರವಣಶಕ್ತಿ, ನನ್ನ ದೃಷ್ಟಿ, ನನ್ನ ರಕ್ತ, ನನ್ನ ಮಾಂಸ, ನನ್ನ ಮೂಳೆಗಳು ಮತ್ತು ನನ್ನ ನರಗಳು ಸರ್ವಲೋಕಗಳ ಪರಿಪಾಲಕನಾಗಿರುವ ಅಲ್ಲಾಹನಿಗೆ ಶಿರಬಾಗಿವೆ.**"**

ಮತ್ತೊಂದು ವರದಿಯಲ್ಲಿ ಹಝ್ರತ್ ಅಬೂಹುರೈರಾ(ರ) ವಿವರಿಸುತ್ತಾರೆ, ನಬಿ(ಸ) ಹೀಗೆ ಹೇಳಿದರು: **"**ನನಗೆ ಎಂದಾದರೂ ಯಾವುದಾದರೂ ಚಿಂತೆ ಎದುರಾಗುವಾಗ, ಜಿಬ್ರೀಲ್ ನನ್ನ ಮುಂದೆ ಪ್ರತ್ಯಕ್ಷರಾಗಿ ಹೀಗೆ ಹೇಳುತ್ತಿದ್ದರು: 'ಹೇ ಮುಹಮ್ಮದ್(ಸ), ನೀವು ಹೀಗೆ ಹೇಳಿರಿ: ಯಾವತ್ತೂ ಮರಣಹೊಂದದ ಆ ಜೀವಂತ ಅಸ್ತಿತ್ವದ ಮೇಲೆ ನಾನು ಭರವಸೆ ಇಟ್ಟೆನು. ಎಲ್ಲ ಪ್ರಶಂಸೆಗಳು ಅಲ್ಲಾಹನಿಗೆ ಸೇರಿವೆ, ಅವನು ಎಂದಿಗೂ ಯಾರನ್ನೂ ಪುತ್ರನನ್ನಾಗಿ ಮಾಡಿಕೊಂಡಿಲ್ಲ ಮತ್ತು ಅವನ ಸಾಮ್ರಾಜ್ಯದಲ್ಲಿ ಎಂದಿಗೂ ಯಾರೂ ಪಾಲುದಾರನಾಗಿಲ್ಲ ಮತ್ತು ಅವನಿಗೆ ಎಂದಿಗೂ ದೌರ್ಬಲ್ಯದ ಸ್ಥಿತಿಯಲ್ಲಿ ಬೆಂಬಲಿಗನಾಗಬಲ್ಲ ಸಹಾಯಕನ ಅಗತ್ಯ ಬಂದಿಲ್ಲ, ನೀವು ಅತ್ಯಂತ ಶಕ್ತವಾಗಿ ಅವನ ಹಿರಿಮೆಯನ್ನು ಸಾರಿರಿ'.**"** (ಹುಝೂರ್ ಹೇಳಿದರು,) ಹಝ್ರತ್ ಪೈಗಂಬರ್(ಸ)ರ ದೃಷ್ಟಿ ಸದಾ ಅಲ್ಲಾಹನ ಮೇಲೆಯೇ ಇರುತ್ತಿತ್ತು.

ನಬಿ(ಸ)ರ ಈ ಗುಣದ ಅತ್ಯುನ್ನತ ಮಟ್ಟವನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಭಾಷಣವೊಂದರಲ್ಲಿ ಹೀಗೆ ಹೇಳಿದ್ದಾರೆ: **"**ನಬಿ(ಸ)ರಿಗೆ ದೇವನ ಮೇಲೆ ಎಂತಹ ಭರವಸೆಯಿತ್ತೆಂದರೆ, ಪ್ರತಿಯೊಂದು ವಿಪತ್ತು ಮತ್ತು ಕಷ್ಟದ ಸಮಯದಲ್ಲಿ ಅವರು ಅವನ ಮೇಲೆಯೇ ದೃಷ್ಟಿಯಿಡುತ್ತಿದ್ದರು ಮತ್ತು ಅವನನ್ನು ಹೊರತುಪಡಿಸಿ ಇತರ ಯಾವುದರ ಕಡೆಗೂ ಗಮನ ಹರಿಸುತ್ತಿರಲಿಲ್ಲ.**"**

ನಬಿ(ಸ) ಇಂದಿನ ಸೂಫಿಗಳಂತೆ ಭೌತಿಕ ಸಾಧನಗಳನ್ನು ತ್ಯಜಿಸುವವರಾಗಿರಲಿಲ್ಲ ಎಂಬುದುರಲ್ಲಿ ಯಾವುದೇ ಸಂದೇಹವಿಲ್ಲ, ಸಾಧನಗಳನ್ನು ಬಳಸುತ್ತಿದ್ದರು. ಏಕೆಂದರೆ ಸಾಧನಗಳನ್ನು ತ್ಯಜಿಸುವುದು ಎಂದರೆ ದೇವನ ಸೃಷ್ಟಿಯನ್ನು ಅವಮಾನಿಸುವುದು ಮತ್ತು ಅವನ ಸೃಷ್ಟಿಯನ್ನು ವ್ಯರ್ಥವೆಂದು ಪರಿಗಣಿಸಿದಂತಾಗಿದೆ. ಆದರೆ ಸಾಧನಗಳನ್ನು ಉಪಯೋಗಿಸಿದ ನಂತರ ನಬಿ(ಸ) ಸಂಪೂರ್ಣವಾಗಿ ದೇವನ ಮೇಲೆ ಭರವಸೆ ಇಡುತ್ತಿದ್ದರು. ಸಾಧನಗಳಿಂದ ಪ್ರಯೋಜನ ಪಡೆಯುತ್ತಿದ್ದರು, ಆದರೆ ಎಂದಿಗೂ ಅವುಗಳ ಮೇಲೆ ನಂಬಿಕೆ ಮತ್ತು ಭರವಸೆ ಇಡುತ್ತಿರಲಿಲ್ಲ ಮತ್ತು ಕೇವಲ ದೇವನ ಕೃಪೆಯ ನಿರೀಕ್ಷೆಯಲ್ಲಿರುತ್ತಿದ್ದರು. ಹಝ್ರತ್ ಇಬ್ನು ಅಬ್ಬಾಸ್(ರ) ವಿವರಿಸುತ್ತಾರೆ, ನಬಿ(ಸ) ಪ್ರತಿಯೊಂದು ಗಾಬರಿಯ ಸಮಯದಲ್ಲಿ ಹೀಗೆ ಹೇಳುತ್ತಿದ್ದರು: **"ಲಾ ಇಲಾಹ ಇಲ್ಲಾಹುವ ರಬ್ಬುಲ್ ಅರ್‌ಶಿಲ್ ಅಝೀಮ್, ಲಾ ಇಲಾಹ ಇಲ್ಲಾಹುವ ರಬ್ಬುಸ್ಸಮಾವಾತಿ ವ ರಬ್ಬುಲ್ ಅರ್‌ಝಿ ವ ರಬ್ಬುಲ್ ಅರ್‌ಶಿಲ್ ಕರೀಮ್**. (ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಬೇರಾರೂ ಇಲ್ಲ, ಅವನು ಅತ್ಯುನ್ನತ ಸಿಂಹಾಸನದ (ಅರ್ಶ್) ಒಡೆಯನಾಗಿದ್ದಾನೆ. ಅಲ್ಲಾಹನ ಹೊರತು ಆರಾಧನೆಗೆ ಅರ್ಹರು ಬೇರಾರೂ ಇಲ್ಲ, ಅವನು ಆಕಾಶಗಳ ಪ್ರಭು ಆಗಿದ್ದಾನೆ, ಅವನು ಭೂಮಿಯ ಪ್ರಭು ಆಗಿದ್ದಾನೆ, ಅವನು ಶ್ರೇಷ್ಠ ಸಿಂಹಾಸನದ ಪ್ರಭು ಆಗಿದ್ದಾನೆ), ಅಂದರೆ ನನ್ನ ನಂಬಿಕೆ ಮತ್ತು ಭರವಸೆ ಕೇವಲ ಅಲ್ಲಾಹನ ಮೇಲೆಯೇ ಇದೆ.**"**

(ಹುಝೂರ್ ಹೇಳಿದರು:) ವಿವಿಧ ಸಂದರ್ಭಗಳಲ್ಲಿ ಮಕ್ಕಾದ ಮುಶ್ರಿಕರು ಹಝ್ರತ್ ಪೈಗಂಬರ್[ಸ]ರಿಗೆ ಆಮಿಷಗಳನ್ನೊಡ್ಡುವುದು, ಅಂದರೆ ವಿವಿಧ ರೀತಿಯ ಲಾಲಸೆಗಳನ್ನು ತೋರಿಸುವುದು ಮತ್ತು ನಬಿ[ಸ] ಅಲ್ಲಾಹನ ಮೇಲೆ ಅಪ್ರತಿಮ ಭರವಸೆ ಇಡುತ್ತಾ ಉತ್ತರಿಸುವುದನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್[ರ] ಈ ಐತಿಹಾಸಿಕ ಘಟನೆಗಳನ್ನು ಹೀಗೆ ವಿವರಿಸಿದ್ದಾರೆ – ಹಝ್ರತ್ ಪೈಗಂಬರ್[ಸ] ಅಲ್ಲಾಹನ ತೌಹೀದಿನ ಬಗ್ಗೆ ಜನರಿಗೆ ಬೋಧಿಸಲು ಮತ್ತು ಶಿರ್ಕನ್ನು ಖಂಡಿಸಲು ಪ್ರಾರಂಭಿಸಿದಾಗ, ಮಕ್ಕಾದವರಿಗೆ ಇದು ಬಹಳ ಅಸಹನೀಯವೆನಿಸಿತು. ಕೊನೆಗೆ ಒಂದು ದಿನ ಅವರು ಒಪ್ಪಂದ ಮಾಡಿಕೊಂಡು ಒಂದು ನಿಯೋಗದ ರೂಪದಲ್ಲಿ ನಬಿ[ಸ]ರ ಚಿಕ್ಕಪ್ಪ ಅಬೂತಾಲಿಬ್‌ರ ಬಳಿಗೆ ಬಂದು ಹೀಗೆ ಹೇಳಿದರು: "ನೀವು ನಮ್ಮ ಗೋತ್ರದ ನಾಯಕರಾಗಿದ್ದೀರಿ, ನಾವು ನಿಮ್ಮನ್ನು ಬಹಳ ಗೌರವಿಸುತ್ತೇವೆ ಮತ್ತು ನಿಮ್ಮ ಮೇಲಿನ ಗೌರವದಿಂದಾಗಿ ನಾವು ನಿಮ್ಮ ಸೋದರಳಿಯನಿಗೆ ಏನೂ ಹೇಳುವುದಿಲ್ಲ. ಆದರೆ ಈಗ ಪರಿಸ್ಥಿತಿ ಮಿತಿಮೀರಿದೆ. ನಾವು ನಿಮ್ಮ ಬಳಿ ಬಂದಿರುವುದರ ಕಾರಣವೇನೆಂದರೆ, ಈ ವಿಷಯದಲ್ಲಿ ನೀವು ಅವರೊಂದಿಗೆ ನಮ್ಮ ಕಡೆಯಿಂದ ಅಂತಿಮವಾಗಿ ಮಾತನಾಡಿ." ಅನಂತರ ಉತ್ಬಾ ಬಿನ್ ರಬೀಅ ಹಝ್ರತ್ ಪೈಗಂಬರ್[ಸ]ರೊಂದಿಗೆ ಆಡಿದ್ದ ಅದೇ ಮಾತುಗಳನ್ನು ಅವರು ಪುನರಾವರ್ತಿಸಿದರು. ಅಂದರೆ ಉನ್ನತ ಮನೆತನದ ಆಮಿಷ, ಅತಿ ಸುಂದರಿ ಮಹಿಳೆಯ ಆಮಿಷ, ಹಣದ ಆಮಿಷ, ಸಂಪತ್ತಿನ ಆಮಿಷ, ಅಧಿಕಾರದ ಆಮಿಷ. ಇವುಗಳ ಆಮಿಷ ನೀಡಿ ಈ ಜನರು ಹೀಗೆ ಹೇಳಿದರು, "ಆದರೆ ಅವರಿಗೆ ಹೇಳಿ, ಅವರು ಕನಿಷ್ಠ ನಮ್ಮ ವಿಗ್ರಹಗಳನ್ನು ನಿಂದಿಸಬಾರದು ಎಂಬ ಪರಿಗಣನೆಯನ್ನಾದರೂ ಇಟ್ಟುಕೊಳ್ಳಲಿ. ಅವರು ನಮ್ಮ ವಿಗ್ರಹಗಳ ಮೇಲೆ ನಂಬಿಕೆ ಇಡಬೇಕೆಂದು ನಾವು ಹೇಳುತ್ತಿಲ್ಲ, ನಮ್ಮ ವಿಗ್ರಹಗಳನ್ನು ತೆಗಳಬಾರದು ಎಂದು ಮಾತ್ರ ಹೇಳುತ್ತಿದ್ದೇವೆ. ಒಂದು ವೇಳೆ ಅವರು ಇವುಗಳಲ್ಲಿ ನಮ್ಮ ಒಂದು ಮಾತನ್ನೂ ಒಪ್ಪದಿದ್ದರೆ, ನೀವು ಅವರ ಕೈ ಬಿಡಿ, ನಾವು ಅವರನ್ನು ಸ್ವತಃ ನಿಭಾಯಿಸುವೆವು." ಅಬೂತಾಲಿಬ್ ನಬಿ[ಸ]ರನ್ನು ಕರೆಸಿದರು ಮತ್ತು ಈ ಪ್ರಸ್ತಾಪಗಳನ್ನು ಉಲ್ಲೇಖಿಸುತ್ತಾ, 'ನೀನು ಯಾವುದೇ ಬೇಡಿಕೆಯಿಟ್ಟರೂ ಅದನ್ನು ಪೂರೈಸಲು ಅವರು ಸಿದ್ಧರಿದ್ದಾರೆ, ಅವರ ವಿಗ್ರಹಗಳನ್ನು ಮಾತ್ರ ನಿಂದಿಸಬಾರದು.' ಎಂಬ ಅವರ ಹೇಳಿಕೆಯನ್ನು ನಬಿ[ಸ]ರ ಮುಂದಿಟ್ಟರು. ತಮ್ಮ ಚಿಕ್ಕಪ್ಪನ ಈ ಸ್ಥಿತಿಯನ್ನು ನೋಡಿದಾಗ, ಅವರ ಉಪಕಾರಗಳನ್ನು ನೆನೆದು ನಬಿ[ಸ]ರಿಗೆ ಕಣ್ಣೀರು ಉಕ್ಕಿಬಂತು. ಆದರೆ ನಬಿ[ಸ] ಹೀಗೆ ಹೇಳಿದರು: "ಚಿಕ್ಕಪ್ಪಾ, ನೀವು ನನಗೆ ಸಹಾಯ ಮಾಡಬೇಕೆಂದು ನಾನು ಹೇಳುತ್ತಿಲ್ಲ, ನೀವು ಖಂಡಿತವಾಗಿಯೂ ನಿಮ್ಮ ಕೋಮಿನ ಜೊತೆಗಿರಿ ಮತ್ತು ನನ್ನನ್ನು ಬಿಟ್ಟುಬಿಡಿ. ದೇವನಾಣೆ, ಈ ಜನರು ಸೂರ್ಯನನ್ನು ನನ್ನ ಬಲಗೈಯಲ್ಲಿ ಮತ್ತು ಚಂದ್ರನನ್ನು ನನ್ನ ಎಡಗೈಯಲ್ಲಿ ತಂದು ನಿಲ್ಲಿಸಿದರೆ ಕೂಡ, ನಾನು ಅಲ್ಲಾಹನ ಬಗ್ಗೆ ಹೇಳುವುದರಿಂದ ಹಿಂದೆ ಸರಿಯಲಾರೆ."

(ಹುಝೂರ್ ಹೇಳಿದರು:) ಇದು ಅಲ್ಲಾಹನ ಅಸ್ತಿತ್ವದ ಮೇಲಿನ ಈಮಾನ್ ಮತ್ತು ಪರಿಪೂರ್ಣ ತವಕ್ಕುಲಿನ ಉನ್ನತ ಸ್ಥಾನವಾಗಿದೆ, ಇದು ಬೇರೆಲ್ಲೂ ಕಾಣಸಿಗುವುದಿಲ್ಲ. ಈ ಘಟನೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್[ಅ] ಹೀಗೆ ಹೇಳುತ್ತಾರೆ: 'ಮುಶ್ರಿಕರು ಅಪವಿತ್ರರು, ಅತ್ಯಂತ ಕೆಟ್ಟ ಸೃಷ್ಟಿಗಳು, ಮೂರ್ಖರು ಮತ್ತು ಶೈತಾನನ ಸಂತತಿ ಆಗಿದ್ದಾರೆ ಹಾಗೂ ಅವರ ಆರಾಧ್ಯರು ಬೆಂಕಿಯ ಉರುವಲು ಮತ್ತು ನರಕದ ಇಂಧನ ಆಗಿದ್ದಾರೆ' ಎಂಬ ವಚನಗಳು ಅವತೀರ್ಣವಾದಾಗ, ಅಬೂತಾಲಿಬ್ ಹಝ್ರತ್ ಪೈಗಂಬರ್[ಸ]ರನ್ನು ಕರೆದು ಹೀಗೆ ಹೇಳಿದರು: "ಹೇ ನನ್ನ ಸೋದರಳಿಯನೇ, ಈಗ ನಿನ್ನ ನಿಂದನೆಯಿಂದಾಗಿ ಸಮುದಾಯ ತೀವ್ರವಾಗಿ ಕೆರಳಿದೆ ಮತ್ತು ಅವರು ನಿನ್ನನ್ನು ಹಾಗೂ ನಿನ್ನ ಜೊತೆ ನನ್ನನ್ನೂ ಕೊಲ್ಲುವ ಸಾಧ್ಯತೆ ಹೆಚ್ಚಾಗಿದೆ. ನೀನು ಅವರ ಬುದ್ಧಿವಂತರನ್ನು ಮೂರ್ಖರೆಂದು ಕರೆದೆ, ಅವರ ಹಿರಿಯರನ್ನು ಅತ್ಯಂತ ಕೆಟ್ಟ ಸೃಷ್ಟಿಗಳು ಎಂದೆ, ಅವರ ಗೌರವಾನ್ವಿತ ಆರಾಧ್ಯರನ್ನು ನರಕದ ಇಂಧನ ಎಂದೆ ಮತ್ತು ಸಾಮಾನ್ಯವಾಗಿ ಅವರೆಲ್ಲರನ್ನೂ ಅಪವಿತ್ರ ಹಾಗೂ ಶೈತಾನನ ಸಂತತಿಯೆಂದು ಕರೆದೆ. ನಾನು ನಿನ್ನ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ, ನಿನ್ನ ನಾಲಿಗೆಯನ್ನು ಹಿಡಿತದಲ್ಲಿಟ್ಟುಕೋ ಮತ್ತು ನಿಂದಿಸುವುದರಿಂದ ಹಿಂದೆ ಸರಿ. ಇಲ್ಲದಿದ್ದರೆ ಕೋಮನ್ನು ಎದುರಿಸುವ ಶಕ್ತಿ ನನಗಿಲ್ಲ." ಹಝ್ರತ್ ಪೈಗಂಬರ್[ಸ] ಇದಕ್ಕೆ ಪ್ರತಿಯಾಗಿ ಹೀಗೆ ಹೇಳಿದರು: "ಹೇ ನನ್ನ ಚಿಕ್ಕಪ್ಪಾ, ಇದು ನಿಂದನೆಯಲ್ಲ, ಬದಲಾಗಿ ವಾಸ್ತವದ ಅಭಿವ್ಯಕ್ತಿ ಮತ್ತು ನೈಜ ಸ್ಥಿತಿಯ ನಿಖರವಾದ ವಿವರಣೆಯಾಗಿದೆ, ಇದೇ ಕಾರ್ಯಕ್ಕಾಗಿ ನನ್ನನ್ನು ಕಳುಹಿಸಲಾಗಿದೆ. ಇದರಿಂದಾಗಿ ನನಗೆ ಮರಣ ಬಂದರೂ ನಾನು ಸಂತೋಷದಿಂದ ನನಗಾಗಿ ಆ ಮರಣವನ್ನು ಸ್ವೀಕಾರಮಾಡಿಕೊಳ್ಳುವೆನು. ನನ್ನ ಜೀವನವು ಇದೇ ಮಾರ್ಗದಲ್ಲಿ ಮುಡಿಪಾಗಿದೆ. ಸಾವಿನ ಭಯದಿಂದ ನಾನು ಸತ್ಯವನ್ನು ಸಾರುವುದರಿಂದ ಹಿಂದೆ ಸರಿಯಲಾರೆ. ಹೇ ಚಿಕ್ಕಪ್ಪಾ, ನಿಮಗೆ ನಿಮ್ಮ ದೌರ್ಬಲ್ಯ ಮತ್ತು ಕಷ್ಟದ ಚಿಂತೆಯಿದ್ದರೆ, ನೀವು ನನಗೆ ಆಶ್ರಯ ನೀಡುವುದರಿಂದ ಹಿಂದೆ ಸರಿಯಿರಿ. ದೇವನಾಣೆ, ನನಗೆ ನಿಮ್ಮ ಯಾವ ಅಗತ್ಯವೂ ಇಲ್ಲ. ದೈವಿಕ ಆಜ್ಞೆಗಳನ್ನು ತಲುಪಿಸುವುದರಿಂದ ನಾನು ಎಂದಿಗೂ ಹಿಂದೆ ಸರಿಯಲಾರೆ. ನನ್ನ ಒಡೆಯನ ಆಜ್ಞೆಗಳು ನನಗೆ ಜೀವಕ್ಕಿಂತಲೂ ಮಿಗಿಲಾಗಿವೆ. ದೇವನಾಣೆ, ನಾನು ಈ ಮಾರ್ಗದಲ್ಲಿ ಕೊಲ್ಲಲ್ಪಟ್ಟರೆ, ಪುನಃ ಪುನಃ ಜೀವಂತನಾಗಿ ಸದಾ ಇದೇ ಮಾರ್ಗದಲ್ಲಿ ಕೊಲ್ಲಲ್ಪಡಬೇಕೆಂದು ಬಯಸುತ್ತೇನೆ. ಇದು ಭಯಪಡುವ ಸ್ಥಾನವಲ್ಲ, ಬದಲಾಗಿ ಅವನ ಮಾರ್ಗದಲ್ಲಿ ಕಷ್ಟವನ್ನು ಅನುಭವಿಸುವುದರಲ್ಲಿ ನನಗೆ ಅಪಾರವಾದ ಆನಂದವಿದೆ." ಹಝ್ರತ್ ಪೈಗಂಬರ್[ಸ] ಈ ಮಾತುಗಳನ್ನು ಹೇಳುತ್ತಿದ್ದಾಗ ಅವರ ಮುಖದಲ್ಲಿ ಸತ್ಯತೆ ಮತ್ತು ಪ್ರಕಾಶದಿಂದ ಕೂಡಿದ ಭಾವಪರವಶತೆ ಎದ್ದು ಕಾಣುತ್ತಿತ್ತು. ಹಝ್ರತ್ ಪೈಗಂಬರ್[ಸ] ಈ ಮಾತುಗಳನ್ನು ಹೇಳಿ ಮುಗಿಸಿದಾಗ, ಸತ್ಯದ ಬೆಳಕನ್ನು ಕಂಡು ಅಬೂತಾಲಿಬ್‌ರ ಕಣ್ಣುಗಳಿಂದ ಅನಿಯಂತ್ರಿತವಾಗಿ ಕಣ್ಣೀರು ಬಂತು ಮತ್ತು ಅವರು ಹೀಗೆ ಹೇಳಿದರು: "ನಿನ್ನ ಈ ಉನ್ನತ ಸ್ಥಿತಿಯ ಬಗ್ಗೆ ನನಗೆ ಅರಿವಿರಲಿಲ್ಲ. ನೀನು ಬೇರೆಯದೇ ಆದ ಬಣ್ಣದಲ್ಲಿ ಮತ್ತು ಬೇರೆಯದೇ ಆದ ಘನತೆಯಲ್ಲಿದ್ದೀ. ಹೋಗು, ನಿನ್ನ ಕೆಲಸದಲ್ಲಿ ನಿರತನಾಗು, ನಾನು ಬದುಕಿರುವ ವರೆಗೂ, ನನ್ನ ಶಕ್ತಿಯಿರುವ ವರೆಗೂ ನಿನಗೆ ಬೆಂಬಲ ನೀಡುತ್ತೇನೆ."

ಅದೇ ರೀತಿ ತಾಯಿಫ್‌ನಿಂದ ಹಿಂದಿರುಗುವಾಗ ಹಝ್ರತ್ ಪೈಗಂಬರ್(ಸ)ರ ತವಕ್ಕುಲ್‌ನ ಒಂದು ಘಟನೆಯಿದೆ. ನಬಿ(ಸ) ಒಂಟಿಯಾಗಿದ್ದರು. ತಾಯಿಫ್‌ನ ನಾಯಕರಿಗೆ ತಬ್ಲೀಗ್ ಮಾಡಲು ಹೋಗಿದ್ದರು. ಅಲ್ಲಿಯ ಜನರು ತೀವ್ರ ದೌರ್ಜನ್ಯವೆಸಗಿದ ಕಾರಣ ನಬಿ(ಸ) ಮರಳಿ ಬಂದರು. ಮೇಲ್ನೋಟಕ್ಕೆ ಮಕ್ಕಾವನ್ನು ಪ್ರವೇಶಿಸಲು ಕೂಡ ಸಾಧ್ಯವಿರಲಿಲ್ಲ. ಜೊತೆಯಲ್ಲಿ ಒಬ್ಬ ಸೇವಕನಿದ್ದನು. 'ಈಗ ಏನಾಗುವುದೋ' ಎಂದು ಸೇವಕನು ಚಿಂತಿತನಾಗಿದ್ದನು. ಆದರೆ ನಬಿ(ಸ)ರಿಗೆ ತಮ್ಮ ಪ್ರಭುವಿನ ಮೇಲೆ ಸಂಪೂರ್ಣ ದೃಢವಿಶ್ವಾಸ ಮತ್ತು ಸಂಪೂರ್ಣ ಭರವಸೆ ಇತ್ತು.

ಇದರ ಬಗ್ಗೆ ಪ್ರಸ್ತಾಪಿಸುತ್ತಾ ಅದೇ ಸೇವಕ ಹಝ್ರತ್ ಝೈದ್ ಬಿನ್ ಹಾರಿಸಾ(ರ) ವಿವರಿಸುತ್ತಾರೆ: "ನಾನು ನಬಿ(ಸ)ರ ಸನ್ನಿಧಿಯಲ್ಲಿ ಹೀಗೆ ಕೇಳಿದೆ: 'ಯಾ ರಸೂಲಲ್ಲಾಹ್, ಈಗ ನೀವು ಮಕ್ಕಾವನ್ನು ಹೇಗೆ ಪ್ರವೇಶಿಸುತ್ತೀರಿ, ಅವರು ನಿಮ್ಮನ್ನು ಹೊರಹಾಕಿದ್ದಾರಲ್ಲವೇ?' ಆಗ ರಸೂಲುಲ್ಲಾಹ್(ಸ) ಭವ್ಯವಾದ ಭರವಸೆಯೊಂದಿಗೆ ಹೀಗೆ ಉತ್ತರಿಸಿದರು: 'ಹೇ ಝೈದ್, ಅಲ್ಲಾಹನು ಖಂಡಿತವಾಗಿಯೂ ಯಾವುದಾದರೂ ಮಾರ್ಗವನ್ನು ಮಾಡಿಕೊಳ್ಳುವನು ಎಂಬುದನ್ನು ನೀನು ನೋಡುವೆ. ಅಲ್ಲಾಹನು ತನ್ನ ಧರ್ಮದ ಬೆಂಬಲಿಗನಾಗಿದ್ದಾನೆ. ಅವನು ತನ್ನ ಪ್ರವಾದಿಯನ್ನು ವಿಜಯಶಾಲಿಯನ್ನಾಗಿಸಿಯೇ ತೀರುತ್ತಾನೆ'. ಅದರಂತೆ ನಬಿ(ಸ) ಖುರೈಶ್ ನಾಯಕರಿಗೆ ಸಂದೇಶ ಕಳುಹಿಸಿ, ತಮ್ಮನ್ನು ಆಶ್ರಯಕ್ಕೆ ತೆಗೆದುಕೊಂಡು ಮಕ್ಕಾದೊಳಗೆ ಪ್ರವೇಶಿಸಲು ವ್ಯವಸ್ಥೆ ಮಾಡಬೇಕೆಂದು ಕೇಳಿದರು. ಆದರೆ ಎಲ್ಲ ನಾಯಕರು ನಿರಾಕರಿಸಿದರು. ಕೊನೆಗೆ ಮುತ್‌ಇಮ್ ಬಿನ್ ಅದೀ ಎಂಬ ಓರ್ವ ಸಭ್ಯ ನಾಯಕನು ನಬಿ(ಸ)ರನ್ನು ತನ್ನ ಆಶ್ರಯದಲ್ಲಿ ಮಕ್ಕಾಗೆ ಪ್ರವೇಶಿಸುವುದಾಗಿ ಘೋಷಿಸಿದನು.

ಹಝ್ರತ್ ಪೈಗಂಬರ್(ಸ)ರ ಹಿಜ್ರತ್ ಸಂದರ್ಭದಲ್ಲಿ ಅಲ್ಲಾಹನ ಮೇಲಿನ ಭರವಸೆಯ ಮಾದರಿಗಳು ಹೇಗಿದ್ದವು? ಹಝ್ರತ್ ಪೈಗಂಬರ್(ಸ)ರಿಗೆ ವಲಸೆ ಮಾಡಲು ಅನುಮತಿ ಸಿಕ್ಕಾಗ, ನಬಿ(ಸ) ಹಝ್ರತ್ ಅಲಿ(ರ)ರಿಗೆ ತಮ್ಮ ಹಿಜ್ರತ್‌ನ ಕಾರ್ಯಕ್ರಮದ ಬಗ್ಗೆ ತಿಳಿಸಿ, ಅವರ ಮೇಲೆ ಜೀವ ಮುಡಿಪಾಗಿಡುವಂತಹ ಒಂದು ಜವಾಬ್ದಾರಿಯನ್ನು ವಹಿಸಿದರು; ಅದೇನೆಂದರೆ, ಇಂದು ರಾತ್ರಿ ಅವರು ನಬಿ(ಸ)ರ ಹಾಸಿಗೆಯ ಮೇಲೆಯೇ ಮಲಗಬೇಕು. ಒಂದು ವರದಿಯ ಪ್ರಕಾರ, ನಬಿ(ಸ) ಸ್ವತಃ ಹೊದ್ದುಕೊಳ್ಳುತ್ತಿದ್ದ ಕೆಂಪು ಬಣ್ಣದ 'ಹಝ್ರಮಿ' ಚಾದರವನ್ನು ಹೊದ್ದುಕೊಂಡು ಮಲಗಬೇಕು; ಮತ್ತು ತಮ್ಮ ಜೀವ ಮುಡಿಪಾಗಿಟ್ಟ ಈ ಸೇವಕನಿಗೆ ದೈವಿಕ ಬೆಂಬಲ ಮತ್ತು ಸಹಾಯದ ಭರವಸೆ ನೀಡುತ್ತಾ ನಬಿ(ಸ) ಹೀಗೆ ಹೇಳಿದರು: "ಯಾವ ಚಿಂತೆಯನ್ನೂ ಮಾಡಬೇಡ ಮತ್ತು ಬಹಳ ನೆಮ್ಮದಿಯಿಂದ ನನ್ನ ಹಾಸಿಗೆಯ ಮೇಲೆ ಮಲಗಿರು, ಶತ್ರುಗಳು ನಿನ್ನ ಒಂದು ಕೂದಲನ್ನು ಕೂಡ ಮುಟ್ಟಲು ಸಾಧ್ಯವಿಲ್ಲ."

ತದನಂತರ ಹಝ್ರತ್ ಪೈಗಂಬರ್(ಸ) ತಮ್ಮ ಮನೆಯಿಂದ ಹೊರಗೆ ಬಂದರು. ಆದರೆ, ಕಣ್ಣುಗಳಲ್ಲಿ ರಕ್ತ ತುಂಬಿಕೊಂಡಂತಿದ್ದ ಮಕ್ಕಾದ ಕಾಫಿರರ ಆಯ್ದ ವೀರರು ಕೈಯಲ್ಲಿ ಖಡ್ಗಗಳನ್ನು ಹಿಡಿದು ನಬಿ(ಸ)ರ ಮನೆಯ ಹೊರಗೆ ಸರ್ವಸನ್ನದ್ಧರಾಗಿ ಕಾವಲು ಕಾಯುತ್ತಿದ್ದರು. ರಾತ್ರಿ ಕತ್ತಲು ಕವಿದ ಮೇಲೆ ದಾಳಿ ಮಾಡಿ ಒಂದೇ ಏಟಿಗೆ ನಬಿ(ಸ)ರನ್ನು ಮುಗಿಸಿಬಿಡಲು ಅವರು ಕಾದು ಕುಳಿತಿದ್ದರು (ನಊಝುಬಿಲ್ಲಾಹ್). ಅವರ ನಾಯಕನಾಗಿದ್ದ ಅಬೂಜಹಲ್, ಬಹಳ ಅಹಂಕಾರ ಮತ್ತು ಅಣಕದಿಂದ ಹೀಗೆ ಹೇಳುತ್ತಿದ್ದನು: "ಮುಹಮ್ಮದ್(ಸ) ಹೇಳುತ್ತಾನೆ, ನೀವು ಅವನ ವಿಷಯದಲ್ಲಿ ಅವನನ್ನು ಅನುಸರಿಸಿದರೆ ನೀವು ಅರಬ್ ಮತ್ತು ಅರಬೇತರ ದೇಶಗಳ ರಾಜರಾಗುತ್ತೀರಿ, ನಂತರ ನೀವು ನಿಮ್ಮ ಸಾವಿನ ಬಳಿಕ ಎಬ್ಬಿಸಲ್ಪಡುವಿರಿ, ಆಗ ನಿಮಗಾಗಿ ಜೋರ್ಡಾನಿನ ತೋಟಗಳಂತಹ ತೋಟಗಳನ್ನು ನಿರ್ಮಿಸಲಾಗುವುದು ಮತ್ತು ಒಂದು ವೇಳೆ ನೀವು ಹಾಗೆ ಮಾಡದಿದ್ದರೆ ನಿಮ್ಮ ನಡುವೆ ಹತ್ಯಾಕಾಂಡ ನಡೆಯುವುದು."

ನಬಿ(ಸ) ಹೊರಬಂದು ಹೀಗೆ ಹೇಳಿದರು: "ಹೌದು! ನಾನು ಹೀಗೆಯೇ ಹೇಳುತ್ತಿದ್ದೇನೆ." ಅನಂತರ ಸೂರಃ ಯಾಸೀನಿನ ಎರಡರಿಂದ ಹತ್ತರ ತನಕದ ವಚನಗಳನ್ನು ಪಠಿಸುತ್ತಾ ಮತ್ತು ಅವರ ತಲೆಗಳ ಮೇಲೆ ಧೂಳನ್ನು ಎರಚುತ್ತಾ ಅವರ ಎದುರಿನಿಂದಲೇ ಹೊರಟುಹೋದರು. ಆದರೆ ನಬಿ(ಸ) ಹೋಗುವುದು ಯಾರಿಗೂ ಕಾಣಿಸಲಿಲ್ಲ ಎಂಬುದು ದೇವನ ಮಹಿಮೆಯಾಗಿದೆ. ಬದಲಿಗೆ ಆ ಜನರು ಆಗಿಂದ್ದಾಗೆ ಒಳಗೆ ಇಣುಕುತ್ತಾ ಮುಹಮ್ಮದ್(ಸ) ತನ್ನ ಹಾಸಿಗೆಯ ಮೇಲೆಯೇ ಇದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಿದ್ದರು.

ಹಿಜ್ರತ್‌ನ ಘಟನೆ ಮತ್ತು ನಬಿ(ಸ)ರ ತವಕ್ಕುಲ್ ಹಾಗೂ ಧೈರ್ಯವನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರನ್ನು ಸುತ್ತುವರಿದಿದ್ದ ಆ ಸಂದಿಗ್ಧ ಸಮಯದಲ್ಲಿ ಹಝ್ರತ್ ಅಬೂಬಕರ್ ಸಿದ್ದೀಕ್(ರ)ರ ಸತ್ಯಸಂಧತೆ ಪ್ರಕಟವಾಯಿತು... ಇಂತಹ ಸ್ಥಿತಿಯಲ್ಲಿ ಹಝ್ರತ್ ಅಬೂಬಕರ್(ರ) ತಮ್ಮ ಸತ್ಯತೆ ಮತ್ತು ನಿಷ್ಠೆಯ ಎಂತಹ ಮಾದರಿಯನ್ನು ತೋರಿಸಿದರೆಂದರೆ ಅದು ಅನಂತಕಾಲದ ವರೆಗೆ ಮಾದರಿಯಾಗಿ ಉಳಿಯುವುದು... ಶತ್ರುಗಳು ಗುಹೆಯ ಬಳಿ ಇದ್ದರು ಮತ್ತು ವಿವಿಧ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದರು. ಕೆಲವರು ಹೇಳಿದರು: 'ಈ ಗುಹೆಯನ್ನು ಶೋಧಿಸಿ, ಏಕೆಂದರೆ ಹೆಜ್ಜೆಗುರುತುಗಳು ಇಲ್ಲಿಗೆ ಬಂದು ಕೊನೆಗೊಂಡಿವೆ', ಆದರೆ ಅವರಲ್ಲಿ ಕೆಲವರು ಹೇಳಿದರು: 'ಇಲ್ಲಿ ಮನುಷ್ಯರು ಹೇಗೆ ಹೋಗಿರಲು ಸಾಧ್ಯ? ಜೇಡರಹುಳು ಬಲೆ ಹೆಣೆದಿದೆ, ಪಾರಿವಾಳ ಮೊಟ್ಟೆಯಿಟ್ಟಿದೆ.' ಈ ರೀತಿಯ ಮಾತುಗಳ ಸದ್ದು ಒಳಗೆ ಕೇಳಿಸುತ್ತಿತ್ತು. ನಬಿ(ಸ) ಬಹಳ ಸ್ಪಷ್ಟವಾಗಿ ಅವುಗಳನ್ನು ಆಲಿಸುತ್ತಿದ್ದರು. ಇಂತಹ ಸ್ಥಿತಿಯಲ್ಲಿ ಶತ್ರುಗಳು ಅಂತ್ಯಗೊಳಿಸುವ ಉದ್ದೇಶದಿಂದ ಹುಚ್ಚರಂತೆ ಮುನ್ನುಗ್ಗಿ ಬಂದಿದ್ದರು. ಆದರೆ ನಬಿ(ಸ) ಅಸಾಧಾರಣ ಶೌರ್ಯವನ್ನು ನೋಡಿರಿ! ಶತ್ರುಗಳು ಕಣ್ಮುಂದೆ ಇದ್ದರು ಮತ್ತು ನಬಿ(ಸ) ತಮ್ಮ ಸತ್ಯವಂತ ಒಡನಾಡಿಯಾದ ಅಬೂಬಕರ್ ಸಿದ್ದೀಕ್(ರ)ರೊಡನೆ ಹೀಗೆ ಹೇಳುತ್ತಿದ್ದರು: **ಲಾ**

**ತಹ್‌ಝನ್ ಇನ್ನಲ್ಲಾಹ ಮಅನಾ** (ದುಃಖಿಸಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ). ನಬಿ(ಸ) ಈ ಮಾತುಗಳನ್ನು ತನ್ನ ನಾಲಗೆಯಿಂದಲೇ ಹೇಳಿದ್ದರು ಎಂದು ಈ ವಾಕ್ಯದಿಂದ ಬಹಳ ಸ್ಪಷ್ಟವಾಗಿ ತಿಳಿದುಬರುತ್ತದೆ. ಏಕೆಂದರೆ ಹೀಗೆ ಹೇಳಲು ಧ್ವನಿಯ ಆವಶ್ಯಕತೆಯಿದೆ. ಕೇವಲ ಸನ್ನೆ ಮಾಡಿದರೆ ಸಾಲದು. ಹೊರಗೆ ಶತ್ರುಗಳು ಚರ್ಚಿಸುತ್ತಿದ್ದರು ಮತ್ತು ಒಳಗೆ ಗುಹೆಯಲ್ಲಿ ಮಾಲಿಕ ಮತ್ತು ಸೇವಕ ಇಬ್ಬರೂ ಮಾತುಕತೆಯಲ್ಲಿ ನಿರತರಾಗಿದ್ದರು. ಶತ್ರುಗಳು ಧ್ವನಿಯನ್ನು ಆಲಿಸಬಹುದು ಎಂಬ ವಿಷಯದ ಬಗ್ಗೆ ಯಾವುದೇ ಚಿಂತೆಯಿಲ್ಲ. ಇದು ಅಲ್ಲಾಹನ ಮೇಲಿನ ಸಂಪೂರ್ಣ ನಂಬಿಕೆ ಮತ್ತು ಅರಿವಿನ ಪುರಾವೆಯಾಗಿದೆ. ದೇವನ ವಾಗ್ದಾನಗಳ ಮೇಲೆ ಸಂಪೂರ್ಣ ಭರವಸೆ ಇತ್ತು.

**ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್.**

————————————*****————————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

*Friday Sermon delivered by Hadrath Khaleefatul Masih Al Khamis(atba)*
At, ***'Masjid Mubarak',*** *Islamabad, Tilford,* U.K. On 11-09-2026
**Summarized by** *Majlis Ansarullah Bharat*
***Kannada Translation:*** Moulavi Inamullah for Kannada Desk, Qadian
***Reviewed by:*** M.P Ibrahim | ***Layout:*** Basheer K.P. Manjeshwar
***Published By:*** Kannada Isha'at Team for Nazarath Nashr-O-Isha'ath, Qadian
***Email:*** *khutuba.kannada@gmail.com*
**You can find all the Sermons archived at**: www.alislam.org/friday-sermon